ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಬುಧವಾರ, ದಿನಾಂಕ : 11 ನೇ ಮಾರ್ಚ್, 2020

ರುದ್ರಭೂಮಿ ಹಾಗೂ ವಿದ್ಯುತ್ ಚಿತಾಗಾರಗಳ ವಿವರ ನೀಡುವ ಕುರಿತು

ಡಾ|| ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) :-

598 (870) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಇರುವ ಒಟ್ಟು ರುದ್ರಭೂಮಿ ಹಾಗೂ ವಿದ್ಯುತ್ ಚಿತಾಗಾರಗಳ ಸಂಖ್ಯೆ ಎಷ್ಟು ; ಈ ವಿದ್ಯುತ್ ಚಿತಾಗಾರಗಳಲ್ಲಿ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿರುವ ಚಿತಾಗಾರಗಳ ಸಂಖ್ಯೆ ಎಷ್ಟು ;

(ಆ) ಬೆಂಗಳೂರಿನಲ್ಲಿ ಸರಾಸರಿಯಾಗಿ ಎಷ್ಟು ಮೃತ ದೇಹಗಳಿಗೆ ಶವ ಸಂಸ್ಕಾರವನ್ನು ಮಾಡಲಾಗುತ್ತಿದೆ ; ಹೂಳುವುದು ಮತ್ತು ಸುಡುವುದನ್ನು ಪ್ರತ್ಯೇಕವಾಗಿ ವಿವರ ನೀಡುವುದು ;

(ಇ) ದಿನನಿತ್ಯ ಶವಸಂಸ್ಕಾರಕ್ಕಾಗಿ ಬರುವ ಸಂಖ್ಯೆಗನುಗುಣವಾಗಿ ವಿದ್ಯುತ್ ಚಿತಾಗಾರಗಳು ಲಭ್ಯವಿದೆಯೇ ?

(ಈ) ಈ ವಿದ್ಯುತ್ ಚಿತಾಗಾರಗಳು ಆಗ್ಗಿಂದಾಗ್ಗೆ ದುರಸ್ಥಿಗೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಯಾವ ಕಾರಣಗಳಿಂದ ಚಿತಾಗಾರಗಳು ಆಗ್ಗಿಂದಾಗ್ಗೆ ದುರಸ್ಥಿಗೆ ಬರುತ್ತಿದೆ; ಈ ಸಮಸ್ಯೆಯನ್ನು ಹೋಗಲಾಡಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ;

(ಉ) ಬೆಂಗಳೂರಿನಲ್ಲಿರುವ ರುದ್ರಭೂಮಿ ಹಾಗೂ ವಿದ್ಯುತ್ ಚಿತಾಗಾರಗಳÀಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; ಇಲ್ಲಿ ಕೆಲಸ ಮಾಡುವ ಸಿಬ್ಬಂದಿಗಳ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಸುರಕ್ಷಿತ ಹಾಗೂ ಇನ್ನಿತರೆ ಸುರಕ್ಷಿತ ಸಾಧನಗಳನ್ನು ಒದಗಿಸಲಾಗುತ್ತಿದೆಯೇ ;

(ಊ) ಪ್ರಸ್ತುತ ಇಲ್ಲಿ ಕಾರ್ಯ ನಿರ್ವಹಿಸುತಿರುವ ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ವೇತನವನ್ನು ನೀಡಲಾಗುತ್ತಿದೆಯೇ ;

(ಋ) ಹೊಸದಾಗಿ ಚಿತಾಗಾರಗಳನ್ನು ನಿರ್ಮಿಸಲು ಸರ್ಕಾರವು ಉದ್ದೇಶಿಸಿದೆಯೇ ; ಇದ್ದಲ್ಲಿ, ಚಿತಾಗಾರಗಳನ್ನು ಯಾವಾಗ ಮತ್ತು ಎಲ್ಲೆಲ್ಲಿ ನಿರ್ಮಿಸಲು ಸರ್ಕಾರವು ಹಮ್ಮಿಕೊಂಡಿದೆ ?